# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 224 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 12.08.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ, ಹಾಸನ, ತುಮಕೂರು ಜಿಲ್ಲೆಗಳು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ತೆಂಗು ಬೆಳೆಗೆ ಕಪ್ಪು ತಲೆ ಹುಳು, ನುಸಿ, ಸೊರಗು ರೋಗ, ಬೆಂಕಿ ರೋಗ, ಹರಳು ಉದುರುವ ರೋಗ ಸೇರಿದಂತೆ ನಾನಾ ರೋಗಗಳು ಒಟ್ಟಿಗೆ ಕಾಣಿಸಿಕೊಂಡು ಅಪಾರ ಪ್ರಮಾಣದಲ್ಲಿ ಹಾನಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ತೆಂಗು ಬೆಳೆಯ ಹಾನಿ ತಪ್ಪಿಸಲು ಹಾಗೂ ರೋಗಗಳ ಹತೋಟಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ತೆಂಗು ಬೆಳೆಯಲ್ಲಿ ರೋಗಗಳ ಹತೋಟಿಗೆ ಇಲಾಖೆಯಿಂದ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿವೆ.<br>1. ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ತೆಂಗಿನ ತೋಟಗಳ ಪುನ:ಶ್ಚೇತನ, ಮರುನಾಟಿ ಮತ್ತು ನಿರ್ವಹಣೆಗಾಗಿ ಪ್ರತಿ ಫಲಾನುಭವಿಗೆ ಒಂದು ಹೆಕ್ಟೇರ್ ವರೆಗೆ ರೂ. 54,000/- ಗಳನ್ನು ನೀಡಲಾಗುತ್ತಿದೆ. ಮೊದಲನೇ ವರ್ಷ ರೂ.45,250/- ಗಳನ್ನು ಹಾಗೂ ಎರಡನೇ ವರ್ಷದ ನಿರ್ವಹಣೆಗೆ ರೂ.8,750/ ಗಳ ಸಹಾಯಧನವನ್ನು ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಹೊಸ ಕಾರ್ಯಕ್ರಮಕ್ಕೆ ರೂ. 452.50 ಲಕ್ಷಗಳ ಅನುದಾನ ನಿಗದಿಯಾಗಿರುತ್ತದೆ ಹಾಗೂ ನಿರ್ವಹಣೆ ಕಾರ್ಯಕ್ರಮಕ್ಕೆ ರೂ. 186.04 ಲಕ್ಷಗಳು ಬಿಡುಗಡೆಯಾಗಿದ್ದು, ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ.<br><br>2.ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ ಕೈಗೊಳ್ಳಲು ಒಂದು ಹೆಕ್ಟೇರ್ ಗೆ ರೂ. 35,000/- ಗಳನ್ನು 2 ವರ್ಷಗಳ ಅವಧಿಗೆ ಮೊದಲನೇ ವರ್ಷ ರೂ.17,500/- ಗಳು ಮತ್ತು ಎರಡನೇ ವರ್ಷ ರೂ.17,500/- ರಂತೆ ಸಹಾಯಧನ ನೀಡಲಾಗುತ್ತಿದೆ. ರೋಗ ಮತ್ತು ಕೀಟಬಾದಿತ ತಾಕುಗಳನ್ನು ಗುಚ್ಛಗಳಲ್ಲಿ ಆಯ್ಕೆ ಮಾಡಿ 2024-25ನೇ ಸಾಲಿನಲ್ಲಿ 6,047 ಹೆಕ್ಟೇರ್ ಪ್ರದೇಶದಲ್ಲಿ 9735 ಫಲಾನುಭವಿಗಳಿಗೆ ರೂ.1,058.19 ಲಕ್ಷಗಳ ಸಹಾಯಧನ ನೀಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ. 4,973.45 ಲಕ್ಷಗಳ ಅನುದಾನ ನಿಗದಿಯಾಗಿದೆ. |

3.ತೆಂಗಿನ ಬೆಳೆಯಲ್ಲಿ ಕಂಡುಬರುವ ರೋಗ/ಕೀಟಗಳ ಹತೋಟಿ ಕ್ರಮಗಳ ಕುರಿತು ಅರಿವು ಮೂಡಿಸಲು ವಿಷಯ ತಜ್ಞರು, ತೋಟಗಾರಿಕಾ ವಿಜ್ಞಾನಗಳ ವಿದ್ಯಾಲಯದ ತಜ್ಞರು, ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (CPCRI), ಕಾಸರಗೋಡು ಹಾಗೂ ತೆಂಗು ಅಭಿವೃದ್ಧಿ ಮಂಡಳಿಯ ಅಧಿಕಾರಿಗಳ ಸಹಯೋಗದೊಂದಿಗೆ ಅಂದಾಜು 12,500 ರೈತರಿಗೆ 85 ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುತ್ತದೆ.

4.ಕಪ್ಪು ತಲೆ ಹುಳು ಹಾಗೂ ಬಿಳಿನೊಣ ಕೀಟಗಳ ನಿಯಂತ್ರಣಕ್ಕಾಗಿ ಇಲಾಖೆಯ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ 23 ಇಲಾಖಾ ಪ್ರಯೋಗ ಶಾಲೆಗಳಲ್ಲಿ ಗೋನಿಯೋಜಸ್ ಪರೋಪಜೀವಿಗಳು ಹಾಗೂ ಐಸೇರಿಯಾ ಶಿಲೀಂದ್ರ ನಾಶಕವನ್ನು ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲಾಗುತ್ತಿದೆ. 2024-25 ನೇ ಸಾಲಿನಲ್ಲಿ ರೂ. 140.00 ಲಕ್ಷಗಳ ಅನುದಾನಕ್ಕೆ 328.44 ಲಕ್ಷ ಸಂಖ್ಯೆಯ ಪರೋಪ ಜೀವಿಗಳನ್ನು ಉತ್ಪಾದಿಸಿ 6969 ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ. 140.00 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಪರೋಪ ಜೀವಿಗಳನ್ನು ಹಾಗೂ ಐಸೇರಿಯಾ ಶಿಲೀಂದ್ರ ನಾಶಕವನ್ನು ಉತ್ಪಾದಿಸಿ ಉಚಿತವಾಗಿ ವಿತರಿಸಲಾಗುತ್ತಿದೆ.

5.ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗಾಗಿ ಪ್ರತಿ ಹೆಕ್ಟೇರಿಗೆ ತಗಲುವ ಘಟಕ ವೆಚ್ಚದ ಶೇ.75ರಂತೆ ಸಾಮಾನ್ಯ ವರ್ಗದ ರೈತರಿಗೆ ರೂ.7,500ಗಳನ್ನು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಂತೆ ರೂ.9000ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 340.00 ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

6.ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ಘಟಕ ವೆಚ್ಚದ ಶೇ.30ರಂತೆ ಪ್ರತಿ ಹೆಕ್ಟೇರಿಗೆ ರೂ.1500 ರಂತೆ 2ಹೆಕ್ಟೇರ್ ರವರೆಗೆ ಗರಿಷ್ಟ ರೂ.3000/-ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 525.00 ಲಕ್ಷಗಳ ಅನುದಾನ ನಿಗದಿಪಡಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

| | | |
|---|---|---|
| | | 7. ಕಪ್ಪು ತಲೆ ಹುಳು ಹಾಗೂ ಬಿಳಿ ನೊಣ ಬಾಧೆಯ ಕುರಿತು ವೈಜ್ಞಾನಿಕ ಸಮೀಕ್ಷೆ ನಡೆಸಲು ಮೊಬೈಲ್ App ಸಿದ್ಧಪಡಿಸಲಾಗಿದ್ದು, ಸಮೀಕ್ಷೆ ನಡೆಸಲು ಕ್ರಮಕೈಗೊಳ್ಳಲಾಗುತ್ತಿದೆ.<br><br>8. ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಜೈವಿಕ ನಿಯಂತ್ರಣದಡಿ ಹೆಚ್ಚಿನ ಬೇಡಿಕೆ ಅನುಸಾರ ಇಲಾಖಾ ಪ್ರಯೋಗಶಾಲೆಗಳಲ್ಲಿ ಗೋನಿಯೋಜಸ್ ಪರೋಪ ಜೀವಿಗಳ ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲು ರೂ.50.00 ಲಕ್ಷಗಳ ಅನುದಾನ ನೀಡುವಂತೆ ಕೋರಿ ತೆಂಗು ಅಭಿವೃದ್ಧಿ ಮಂಡಳಿ, ಕೊಚ್ಚಿ, ಕೇರಳ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| ಇ) | ರಾಜ್ಯದಲ್ಲಿ ಕೀಟಬಾಧೆ ಮತ್ತು ನಾನಾ ರೋಗಗಳಿಂದ ಹಾನಿಗೊಳಗಾದ ತೆಂಗು ಬೆಳೆಯ ಪ್ರದೇಶದ ವಿಸ್ತೀರ್ಣ ಹಾಗೂ ನಷ್ಟದ ಅಂದಾಜು ಮೊತ್ತ ಎಷ್ಟು: (ರೋಗವಾರು ಹಾನಿಯಾದ ಪ್ರದೇಶ, ಉಂಟಾದ ಆರ್ಥಿಕ ನಷ್ಟದ ಮಾಹಿತಿ ನೀಡುವುದು – ಮಂಡ್ಯ ಮತ್ತು ಹಾಸನ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿ ನೀಡುವುದು). | ರಾಜ್ಯದಲ್ಲಿ ಕೀಟಬಾದೆ ಮತ್ತು ನಾನಾ ರೋಗಗಳಿಂದ ಹಾನಿಗೊಳಗಾದ ತೆಂಗು ಬೆಳೆಯ ಪ್ರದೇಶದ ಅಂದಾಜು ವಿಸ್ತೀರ್ಣ 4,94,621.92 ಹೆಕ್ಟೇರ್ ಹಾಗೂ ನಷ್ಟದ ಅಂದಾಜು ಮೊತ್ತ ರೂ.1,51,828.16 ಲಕ್ಷಗಳಾಗಿರುತ್ತದೆ.<br><br>ಮಂಡ್ಯ ಮತ್ತು ಹಾಸನ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ -1 ಮತ್ತು 2ರಲ್ಲಿ ಹಾಗೂ ರಾಜ್ಯದಲ್ಲಿನ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ -3ರಲ್ಲಿ ನೀಡಲಾಗಿದೆ. |
| ಈ) | ಬೆಳೆ ನಷ್ಟದ ಅಂದಾಜು ಆಧರಿಸಿ ತೆಂಗು ಬೆಳೆಗಾರರಿಗೆ ಪರಿಹಾರ ವಿತರಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು: | ತೋಟಗಾರಿಕೆ ಇಲಾಖೆಯಲ್ಲಿ ಪರಿಹಾರ ವಿತರಿಸುವ ಕಾರ್ಯಕ್ರಮ ಇರುವುದಿಲ್ಲ, ಈ ಮೇಲಿನ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ತೆಂಗು ಬೆಳೆಗಾರರಿಗೆ ಸಹಾಯಧನ ನೀಡಲಾಗುತ್ತಿದೆ. |
| ಉ) | ರಾಜ್ಯದಲ್ಲಿ ತೆಂಗು ಬೆಳೆಯುವ ಪ್ರದೇಶಗಳು ಯಾವುವು: ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತದೆ? (ಜಿಲ್ಲಾವಾರು ಮಾಹಿತಿ ನೀಡುವುದು). | ರಾಜ್ಯದಲ್ಲಿ ತೆಂಗು ಬೆಳೆಯನ್ನು ಪ್ರಮುಖವಾಗಿ ತುಮಕೂರು, ಹಾಸನ, ಮಂಡ್ಯ, ಮೈಸೂರು, ಬೆಂಗಳೂರು ದಕ್ಷಿಣ, ಚಿಕ್ಕಮಗಳೂರು, ಚಿತ್ರದುರ್ಗ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಒಟ್ಟು 5.65 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-04ರಲ್ಲಿ ನೀಡಲಾಗಿದೆ. |

HORTI 343 HGM 2025

S. S. Mallikarjun

(ಎಸ್.ಎಸ್.ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

LCQ-224

## ಅನುಬಂಧ-1 ಮಂಡ್ಯ ಜಿಲ್ಲೆಯ ತಾಲ್ಲೂಕುವಾರು ವಿವರ

| ಕ್ರ. ಸಂ. | ತಾಲ್ಲೂಕುಗಳು | ಕಪ್ಪು ತಲೆ ಹುಳುವಿನ ಬಾಧಿತಪ್ರದೇಶಗಳು (ಹೆ. ಗಳಲ್ಲಿ) | ಅಂದಾಜುನಷ್ಟದ ಮೊತ್ತ (ರೂಲಕ್ಷಗಳಲ್ಲಿ) | ಬಿಳಿನೊಣಬಾಧೆಯಪ್ರದೇಶಗಳು (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂಲಕ್ಷಗಳಲ್ಲಿ) | ಸೊರಗು ರೋಗದಿಂದ ಬಾಧಿತ ಪ್ರದೇಶ (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂಲಕ್ಷಗಳಲ್ಲಿ) | ಬೆಂಕಿ ರೋಗ ದಿಂದಬಾಧಿತಪ್ರದೇಶ (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂ.ಲಕ್ಷಗಳಲ್ಲಿ) | ಹರಳು ಉದುರುವರೋಗದಿಂದಬಾಧಿತಪ್ರದೇಶ (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂ.ಲಕ್ಷಗಳಲ್ಲಿ) | ಇತರೆ ಕೀಟ / ರೋಗ ಬಾಧಿತ ಪ್ರದೇಶಗಳು (ಹೆ. ಗಳಲ್ಲಿ) (ರಸ ಸೋರುವ ರೋಗ, ಕೆಂಪು ಮೂತಿ ಹುಳು, ರೈನೋ ಜೆರೆರ್ಸ್ ದುಂಬಿ) | ಅಂದಾಜು ನಷ್ಟದ ಮೊತ್ತ (ರೂಲಕ್ಷಗಳಲ್ಲಿ) |
|---|---|---|---|---|---|---|---|---|---|---|---|---|---|
| 1. | ಕೆ.ಆರ್.ಪೇಟೆ | 1200 | 300.00 | 4800 | 720.00 | 0 | 0 | 0 | 0 | 0 | 0 | 500 | 75.00 |
| 2. | ಮದ್ದೂರು | 3369 | 6064.20 | 9250 | 16650.00 | 337.00 | 606.60 | 4284 | 7711.20 | 6125 | 11025.0 | 4200 | 7518.00 |
| 3. | ಮಳವಳ್ಳಿ | 500 | 400.00 | 1500 | 300.00 | 50.00 | 160.00 | 2500 | 500.00 | 50 | 160.00 | 100 | 360.00 |
| 4. | ಮಂಡ್ಯ | 154 | 130.00 | 1490 | 321.00 | 4.00 | 0.60 | 0 | 0 | 80 | 12.00 | 20 | 3.00 |
| 5. | ನಾಗಮಂಗಲ | 40 | 72.00 | 15771 | 4731.00 | 0 | 0 | 550 | 80.00 | 0 | 0 | 6898 | 1034.00 |
| 6. | ಪಾಂಡವಪುರ | 425.00 | 340.00 | 2950.00 | 1180.00 | 0 | 0 | 0 | 0 | 0 | 0 | 0 | 0 |
| 7. | ಶ್ರೀರಂಗಪಟ್ಟಣ | 200 | 160.00 | 507 | 80.00 | 0 | 0 | 0 | 0 | 240 | 25.00 | 110 | 16.00 |
| | ಒಟ್ಟು | 5888 | 7466.2 | 36268 | 23982 | 391 | 767.2 | 7334 | 8291.2 | 6495 | 11222.00 | 11828 | 9006.00 |

## ಅನುಬಂಧ-2 ಹಾಸನ ಜಿಲ್ಲೆಯ ತಾಲ್ಲೂಕುವಾರು ವಿವರ

LC9-224

| ಕ್ರ.ಸಂ. | ತಾಲ್ಲೂಕು | ತೆಂಗು ಬೆಳೆ ವಿಸ್ತೀರ್ಣ(ಹೆ.) | ಹಾನಿಗೊಳಗಾಗಿರುವ ವಿಸ್ತೀರ್ಣ(ಹೆ.) | | | | | ಹಾನಿಯ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|---|
| | | | ಕಪ್ಪು ತಲೆಹುಳು | ಬಿಳಿ ನೊಣ | ಕಾಂಡ ಸೋರುವ ರೋಗ | ಅಣಬೆ ರೋಗ | ಹಾನಿಯ ಒಟ್ಟು ವಿಸ್ತೀರ್ಣ | |
| 1 | ಆಲೂರು | 368.54 | - | - | - | - | **0.00** | **0.00** |
| 2 | ಅರಕಲಗೂಡು | 2987.00 | - | 1800.00 | 250.00 | 50.00 | **2100.00** | **472.50** |
| 3 | ಅರಸೀಕೆರೆ | 56473.32 | 8000.00 | 38000.00 | 14000.00 | 200.00 | **60200.00** | **13545.00** |
| 4 | ಬೇಲೂರು | 4032.29 | - | 550.00 | 150.00 | - | **700.00** | **157.50** |
| 5 | ಚನ್ನರಾಯಪಟ್ಟಣ | 40710.78 | 1910.00 | 36260.00 | 350.00 | 30.00 | **38550.00** | **8673.75** |
| 6 | ಹಾಸನ | 10721.41 | 460.00 | 2790.00 | 804.00 | 600.00 | **4654.00** | **1047.15** |
| 7 | ಹೊಳೆನರಸೀಪುರ | 3405.85 | 103.00 | 2800.00 | 150.00 | - | **3053.00** | **686.93** |
| 8 | ಸಕಲೇಶಪುರ | 92.81 | - | - | - | - | **0.00** | **0.00** |
| | **ಒಟ್ಟು** | **118792.00** | **10473.00** | **82200.00** | **15704.00** | **880.00** | **109257.00** | **24582.83** |

ಹಾನಿಯ ಅಂದಾಜು ಮೊತ್ತವನ್ನು NDRF / SDRF ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್ ಗೆ ರೂ.22500/- ರಂತೆ ಅಂದಾಜಿಸಿ ನೀಡಲಾಗಿರುತ್ತದೆ.

LCQ-224

# ಅನುಬಂಧ-03

## ತೆಂಗು ಬೆಳೆಯಲ್ಲಿ ಕೀಟ / ರೋಗಗಳಿಂದ ಬಾಧಿತ ಪ್ರದೇಶದ ವಿವರ

| ಕ್ರ. ಸಂ. | ಜಿಲ್ಲೆಗಳು | ಕಪ್ಪು ತಲೆ ಹುಳುವಿನ ಬಾಧಿತ ಪ್ರದೇಶಗಳು (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂ ಲಕ್ಷಗಳಲ್ಲಿ) | ಬಿಳಿ ನೊಣ ಬಾಧೆಯ ಪ್ರದೇಶಗಳು (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂ ಲಕ್ಷಗಳಲ್ಲಿ) | ಸೊರಗು ರೋಗದಿಂದ ಬಾಧಿತ ಪ್ರದೇಶ (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂ ಲಕ್ಷಗಳಲ್ಲಿ) | ಬೆಂಕಿ ರೋಗ ದಿಂದ ಬಾಧಿತ ಪ್ರದೇಶ (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂ ಲಕ್ಷಗಳಲ್ಲಿ) | ಹರಳು ಉದುರುವ ರೋಗ ದಿಂದ ಬಾಧಿತ ಪ್ರದೇಶ (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂ ಲಕ್ಷಗಳಲ್ಲಿ) | ಇತರೆ ಕೀಟ / ರೋಗ ಬಾಧಿತ ಪ್ರದೇಶಗಳು (ಹೆ. ಗಳಲ್ಲಿ) | ಅಂದಾಜು ನಷ್ಟದ ಮೊತ್ತ (ರೂ ಲಕ್ಷಗಳಲ್ಲಿ) | ಒಟ್ಟು ಕೀಟ/ ರೋಗಗಳಿಂದ ಬಾಧಿತ ವಿಸ್ತೀರ್ಣ (ಹೆ. ಗಳಲ್ಲಿ) | ಒಟ್ಟು ಅಂದಾಜು ನಷ್ಟದ ಮೊತ್ತ (ರೂ ಲಕ್ಷಗಳಲ್ಲಿ) |
|---|---|---|---|---|---|---|---|---|---|---|---|---|---|---|---|
| 1. | ತುಮಕೂರು | 5851 | 1316.48 | 127960 | 28791.00 | 5750.75 | 1293.92 | 425.75 | 95.79 | 6400.42 | 1440.09 | - | - | 146387.92 | 32937.28 |
| 2. | ಹಾಸನ | 10473 | 2356.43 | 82200 | 18495.00 | 15704 | 3533.40 | 0 | 0.00 | 0 | 0.00 | 880 | 198.00 | 109257.00 | 24582.83 |
| 3. | ಮಂಡ್ಯ | 5888 | 7466.20 | 36268 | 23982.00 | 391 | 767.20 | 7334 | 8291.20 | 6495 | 11222.00 | 11828 | 9006.00 | 68204.00 | 60734.60 |
| 4. | ಮೈಸೂರು | 2035 | 305.25 | 1108 | 99.72 | 298 | 26.82 | - | - | 141 | 12.69 | 413 | 24.78 | 3995.00 | 469.26 |
| 5. | ಚಿಕ್ಕಮಗಳೂರು. | 12120 | 722.25 | 38510 | 8664.75 | 13335 | 3000.38 | 18820 | 3735.00 | - | - | 2950 | 22.50 | 85735.00 | 16144.88 |
| 6. | ಚಿತ್ರದುರ್ಗ | 19655 | 7075.96 | 30032 | 7207.57 | 1355 | 112.50 | 0 | 0.00 | 6620 | 1191.54 | 2207 | 132.39 | 59869.00 | 15719.96 |
| 7. | ಬೆಂಗಳೂರು ದಕ್ಷಿಣ | 3424 | 105.38 | 6312 | 194.07 | 25 | 2.40 | 1270 | 38.10 | 2498 | 87.83 | 1678 | 50.55 | 15207.00 | 478.33 |
| 8. | ದಾವಣಗೆರೆ | 2212 | 332.00 | 899 | 108.00 | - | - | - | - | - | - | 65 | 5.20 | 3176.00 | 445.20 |
| 9. | ಶಿವಮೊಗ್ಗ | 355 | 29.31 | 280 | 46.36 | 10 | 0.86 | 0 | 0.00 | 136 | 11.90 | 65 | 5.69 | 846.00 | 94.12 |
| 10. | ಉತ್ತರ ಕನ್ನಡ | 31 | 2.80 | 690 | 6.80 | 7 | 0.50 | 0 | 0.00 | 50 | 9.00 | 592 | 46.50 | 1370.00 | 65.60 |
| 11. | ಉಡುಪಿ | 0 | 0 | 0 | 0.00 | 0 | 0.00 | 0 | 0.00 | 0 | 0.00 | 75 | 52.00 | 75.00 | 52.00 |
| 12. | ದಕ್ಷಿಣ ಕನ್ನಡ | 0 | 0 | 0 | 0.00 | 0 | 0.00 | 0 | 0.00 | 54 | 76.20 | 446 | 27.91 | 500.00 | 104.11 |
| | ಒಟ್ಟು | 62044 | 19712.05 | 324259.00 | 87595.27 | 36875.75 | 8737.97 | 27849.75 | 12160.09 | 22394.42 | 14051.25 | 21199.00 | 9571.52 | 494621.92 | 151828.16 |

## ಅನುಬಂಧ-4 (ತೆಂಗು ಬೆಳೆಯ ಜಿಲ್ಲಾವಾರು ವಿವರ)

| ಕ್ರ.ಸಂ. | ಜಿಲ್ಲೆಗಳು | ವಿಸ್ತೀರ್ಣ (ಹೆ.ಗಳಲ್ಲಿ) | ಉತ್ಪನ್ನ (ಮೆ.ಟನ್) |
|---|---|---|---|
| 1 | ಬೆಂಗಳೂರು (ನ) | 2288 | 17139 |
| 2 | ಬೆಂಗಳೂರು (ಗ್ರಾ) | 2539 | 22586 |
| 3 | ಚಿಕ್ಕಬಳ್ಳಾಪುರ | 482 | 3614 |
| 4 | ಚಿತ್ರದುರ್ಗ | 42937 | 195784 |
| 5 | ದಾವಣಗೆರೆ | 4744 | 33313 |
| 6 | ಕೋಲಾರ | 674 | 3469 |
| 7 | ಬೆಂಗಳೂರು ದಕ್ಷಿಣ (ರಾಮನಗರ) | 27959 | 192940 |
| 8 | ಶಿವಮೊಗ್ಗ | 6761 | 30105 |
| 9 | ತುಮಕೂರು | 176440 | 536538 |
| 10 | ಬಾಗಲಕೋಟೆ | 209 | 1079 |
| 11 | ಬೆಳಗಾವಿ | 93 | 864 |
| 12 | ವಿಜಯಪುರ | 39 | 275 |
| 13 | ಧಾರವಾಡ | 127 | 823 |
| 14 | ಗದಗ | 338 | 1976 |
| 15 | ಹಾವೇರಿ | 669 | 4382 |
| 16 | ಉತ್ತರಕನ್ನಡ | 7564 | 41398 |
| 17 | ಬಳ್ಳಾರಿ | 117 | 560 |
| 18 | ಬೀದರ್ | 7 | 42 |
| 19 | ಕಲಬುರಗಿ | 12 | 58 |
| 20 | ಕೊಪ್ಪಳ | 198 | 1691 |
| 21 | ರಾಯಚೂರು | 110 | 627 |
| 22 | ಯಾದಗಿರಿ | 40 | 206 |
| 23 | ಚಾಮರಾಜನಗರ | 8398 | 43248 |
| 24 | ಚಿಕ್ಕಮಗಳೂರು | 43308 | 222793 |
| 25 | ದಕ್ಷಿಣ ಕನ್ನಡ | 25341 | 143023 |
| 26 | ಹಾಸನ | 112923 | 598377 |
| 27 | ಕೊಡಗು | 1673 | 14098 |
| 28 | ಮಂಡ್ಯ | 60551 | 190171 |
| 29 | ಮೈಸೂರು | 20530 | 76685 |
| 30 | ಉಡುಪಿ | 16899 | 94938 |
| 31 | ವಿಜಯನಗರ | 656 | 3282 |
| | ಒಟ್ಟು | **564624** | **2476085** |